ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯ ಮಂತ್ರಿಗಳು ಸ್ವಲ್ಪ ಈ ಕಡೆಗೆ ಗಮನ ಕೊಟ್ಟರೆ ಒಳ್ಳೆಯದು. ನೀವು ಹೇಗಿದ್ದರೂ ಕೂಡ ಬಜೆಟ್‌ನಲ್ಲಿ ಸಾಕಷ್ಟು ರೈತರಿಗೆ ಅನುಕೂಲತೆ ಮಾಡಿಕೊಟ್ಟಿದ್ದೇನೆ ಎಂದು ಹೇಳುತ್ತಲೇ ಇದ್ದೀರಿ. ಈಗ ಇಡೀ ರಾಜ್ಯದಲ್ಲಿ ಈ ಟಿಲ್ಲರ್ ಮತ್ತು ಟ್ರಾಕ್ಟರ್‌ಗಳನ್ನು ಮೂರು-ನಾಲ್ಕು ಎಕರೆ ಜಮೀನು ಇರತಕ್ಕಂಥ ರೈತರು ಬಳಸುತ್ತಿದ್ದಾರೆ. ತಾವು ಉತ್ತರ ಕೊಡುವಂಥ ಸಂಬರ್ಧದಲ್ಲಿ ಈ ಸೇಲ್ಸ್ ಟ್ಯಾಕ್ಸ್‌ನ್ನಾದರೂ ಕೂಡ ತೆಗೆಯುವ ಪ್ರಯತ್ನ ಮಾಡುತ್ತೀರಾ? ಏಕೆಂದರೆ ಕೇಂದ್ರ ಸರ್ಕಾರದವರು ಮೊನ್ನೆ ಬಜೆಟ್‌ನಲ್ಲಿ ಎಕ್ಸೈಸ್ ಡ್ಯೂಟಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಿದ್ದಾರೆ. ಹೀಗಾಗಿ ಟಿಲ್ಲರ್ ಮತ್ತು ಟ್ರಾಕ್ಟರ್‌ಗಳಿಗೆ ಏನು ಸೇಲ್ಸ್ ಟ್ಯಾಕ್ಸ್‌ನ್ನು ತಾವು ಹಾಕುತ್ತಿದ್ದೀರಿ, ಅದನ್ನು ತೆಗೆಯುವಂಥ ಪ್ರಯತ್ನದ ಬಗ್ಗೆ ಯೋಚನೆ ಮಾಡುತ್ತೀರಾ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿ) : ಹೇಗೂ ಬಜೆಟ್‌ಮೇಲೆ ಚರ್ಚೆಯಾಗುತ್ತದೆ. ಅದರ ಮೇಲೆ ಚರ್ಚೆ ಮಾಡುವಾಗ ಅದನ್ನು ಪರಿಶೀಲನೆ ಮಾಡಿ ಯಾವ ರೀತಿ ಮಾಡಬೇಕು ಅಂತ ಯೋಚನೆ ಮಾಡೋಣ.

ಶ್ರೀ ಡಿ.ಆರ್. ಪಾಟೀಲ್ : ನನ್ನದೊಂದು ಉಪ ಪ್ರಶ್ನೆ.

ಅಧ್ಯಕ್ಷರು : ಸಂಬಂಧಪಟ್ಟ ಸದಸ್ಯರಿಗೆ ಮೂರು ಸಾರಿ ಅವಕಾಶ ಕೊಡಬೇಕು. ಹೀಗೆ ಎಲ್ಲರೂ ಕೇಳಿದರೆ ನನಗೆ ಸಭೆ ನಡೆಸುವುದಕ್ಕೆ ಕಷ್ಟವಾಗುತ್ತದೆ.

ಪ್ರಶ್ನೆ : 30(268)

ಅಧ್ಯಕ್ಷರು : ಮಾನ್ಯ ರೇವು ನಾಯಕ್ ಬೆಳಮಗಿಯವರೆ, ನಿಮ್ಮ ಪ್ರಶ್ನೆಗೆ ಒಂದು ವಾರ ಕಾಲಾವಕಾಶ ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ನಾನು ಕೊಡಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಪ್ರಶ್ನೆ ಕೇಳುವಂಥಾದ್ದು ಸಾಕಷ್ಟು ಇದ್ದರೂ ಕೂಡ ಪ್ರಶ್ನೆ ಬರುವುದು ಬಹಳ ಅಪರೂಪದ ಪ್ರಸಂಗ. ನೂರು ಪ್ರಶ್ನೆಗಳನ್ನು ಕೇಳಿದಾಗ ಒಂದು-ಎರಡು ಪ್ರಶ್ನೆಗೆ ಇಲ್ಲಿ ಸದನದಲ್ಲಿ ಉತ್ತರ ಸಿಗುತ್ತದೆ. ಇಂತಹ ಸಂದರ್ಭದಲ್ಲಿ ಮಾನ್ಯ ಶಾಸಕರಾದ ರೇವು ನಾಯಕ್ ಅವರು ಬಹಳ ಮಹತ್ವವಾದಂಥ ಪ್ರಶ್ನೆಯನ್ನು ಕೇಳಿದ್ದಾರೆ. ಅವರು ಏನು ಕೇಳಿದ್ದಾರೆ ಎಂದರೆ ರೈತರಿಗೆ...

ಅಧ್ಯಕ್ಷರು : ಈಗ ಮಾನ್ಯ ಕಾರಜೋಳರವರೇ, ಅವರು ಬಹಳ ವಿವರಗಳನ್ನು ಕೇಳಿದ್ದಾರೆ. ಆದ್ದರಿಂದ ಸಚಿವರು ಒಂದು ವಾರ ಕಾಲಾವಕಾಶವನ್ನು ಕೇಳಿದ್ದಾರೆ. ನಾನು ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನನಗೆ ಸ್ವಲ್ಪ ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ದಯಮಾಡಿ ನನ್ನ ಮಾತು ಕೇಳಿ. ಅದು ಈಗಾಗಲೇ ಮುಗಿದುಹೋಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ದಯಮಾಡಿ ತಾವು ಎರಡು ಶಬ್ದಗಳನ್ನು ಕೇಳಬೇಕು....

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಬೇಕು. ನಾನು ಪ್ರಶ್ನೋತ್ತರಗಳನ್ನು ಮುಗಿಸಬೇಕೇ ಬೇಡವೇ? ಸುಮ್ಮನೆ ವಿವರಣೆಯನ್ನು ಕೊಟ್ಟುಕೊಂಡು ಕುಳಿತರೆ ಹೇಗೆ?

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಮಾನ್ಯ ಶಾಸಕರು ಕೇಳಿದ್ದು ಬಹಳ ಮಹತ್ವದ ಪ್ರಶ್ನೆ ಇದೆ. ಈಗ ಒಂದೇ ಜಿಲ್ಲೆಯಲ್ಲಿ ಪ್ರಭಾವಿ ನಾಯಕರು ಇರತಕ್ಕಂಥ ತಾಲ್ಲೂಕುಗಳಲ್ಲಿ, ಕ್ಷೇತ್ರಗಳಲ್ಲಿ ಕೋಟ್ಯಾಂತರ ರೂಪಾಯಿ ಪ್ರತಿ ತಿಂಗಳೂ ವಿಮಾ ಹಣ ಪೇಮೆಂಟ್ ಆಗುತ್ತದೆ. ಅದೇ ಜಿಲ್ಲೆಯಲ್ಲಿರತಕ್ಕಂಥ ಬಡ ಒಬ್ಬ ಶಾಸಕನ ಕ್ಷೇತ್ರದಲ್ಲಿ, ಹಿಂದುಳಿದ ಪ್ರದೇಶದಲ್ಲಿ ಪೇಮೆಂಟ್ ಆಗುತ್ತಿಲ್ಲ.

ಅಧ್ಯಕ್ಷರು : ಈಗ ಮಾನ್ಯ ಕಾರಜೋಳರವರೆ, ಅವರು ಕಾಲಾವಕಾಶ ಕೇಳಿದ್ದಾರೆ. ನಾನು ಉತ್ತರ ಕೊಡಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ದಯಮಾಡಿ ನನಗೆ ಅನುಮತಿಯನ್ನು ಕೊಡಬೇಕು. ಇದು ಪ್ರಭಾವಿ ನಾಯಕರು ಇರುವಂಥ ಕಡೆ ಪೇಮೆಂಟ್ ಆಗುತ್ತದೆ. ಆದರೆ ರೇವು ನಾಯಕ್‌ರಂಥವರು ಇದ್ದಲ್ಲಿ ಪೇಮೆಂಟ್ ಆಗುವುದಿಲ್ಲ ಎಂದರೆ ಇದರ ಅರ್ಥ ಏನು?

ಅಧ್ಯಕ್ಷರು : ಈಗ ಇವರು ಇನ್ನೂ ಉತ್ತರವನ್ನೇ ಕೊಟ್ಟಿಲ್ಲ. ನೀವು ಹಿರಿಯ ಸದಸ್ಯರು ಮತ್ತು ಉಪನಾಯಕರು ಇದ್ದೀರಿ. ನೀವೇ ಹೀಗೆ ಮಾಡಿದರೆ ಹೇಗೆ? ದಯಮಾಡಿ ಅವರು ಕಾಲಾವಕಾಶ ಕೇಳಿದ್ದಾರೆ. ಅವರು ಅಸ್ಪಷ್ಟವಾಗಿ ಉತ್ತರ ಕೊಟ್ಟಿದ್ದರೆ, ಸರಿಯಾದ ಉತ್ತರ ಕೊಡದೇ ಇದ್ದರೆ ಆಗ ನೀವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ತಾವು ಏಕೆ ಆವೇಶಕ್ಕೆ ಒಳಗಾಗುತ್ತೀರೋ ಗೊತ್ತಿಲ್ಲ.

ಅಧ್ಯಕ್ಷರು : ನಾನು ಆವೇಶಕ್ಕೆ ಒಳಗಾಗುತ್ತಿಲ್ಲ. ಪ್ರಶ್ನೆ ಏನು ಎಂದರೆ ಅವರು ಕಾಲಾವಕಾಶ ಕೇಳಿದ್ದಾರೆ. ನಾನು ಉತ್ತರ ಕೊಡಿಸುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ. ಒಂದು ಸಾರಿ ಪ್ರಶ್ನೋತ್ತರ ವೇಳೆಯಲ್ಲಿ ಇವತ್ತಿನದಿವಸ ಈ ಪ್ರಶ್ನೆ ಬಂದಮೇಲೆ ನಾವು ಅಪರೂಪಕ್ಕೆ ಹದಿನಾಲ್ಕು-ಹದಿನೈದು ದಿವಸದಲ್ಲಿ ಈ ಪ್ರಶ್ನೆಯನ್ನು ಕಳುಹಿಸಿದ ಮೇಲೆ ಉತ್ತರ ಕೊಡುವುದಕ್ಕೆ ಆಗದೇ ಇರುವಂತಹ ವಿಶೇಷ ಕಾರಣ ಇದ್ದರೆ ನೀವು ಇನ್ನೂ ಎಂಟು ದಿವಸ ಕಾಲಾವಕಾಶ ಕೊಡಿ. ಇದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ನೀವು ಅವರನ್ನು ಕಂಟ್ರೋಲ್ ಮಾಡಬೇಕಾಗುತ್ತದೆ. ಇವತ್ತು ಒಂದು ಪ್ರಶ್ನೆ ಬಂದಮೇಲೆ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ನಮ್ಮ ಸದಸ್ಯರು ಎಂ.ಎಲ್.ಎ. ಆಗಿರುವಂಥ ಕ್ಷೇತ್ರದಲ್ಲಿ ಬೆಳೆ ವಿಮೆಯನ್ನು ಕೊಟ್ಟಿಲ್ಲ. ನಾಳೆ ವಾಪಸ್ಸು ಬಂದು ಅವರು ಜನರಿಗೆ ಏನು ಉತ್ತರ ಕೊಡುತ್ತಾರೆ ಸ್ವಾಮಿ? ತಾವು ಇನ್ನು ಮೂರು-ನಾಲ್ಕು ದಿವಸಲದಲಿ ಸಮಂಜಸವಾದ ಉತ್ತರವನ್ನು ಕೊಡಿಸಿಕೊಡಬೇಕು.

ಅಧ್ಯಕ್ಷರು : ನಾನು ಉತ್ತರ ಕೊಡಿಸುತ್ತೇನೆ ಎಂದು ಹೇಳಿದ್ದೇನಲ್ಲ?

ಶ್ರೀ ರೇವು ನಾಯಕ್ ಬೆಳಮಗಿ : ನನಗೆ ಇದು ಉದ್ದೇಶಪೂರ್ವಕವಾಗಿ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು : ನಾನು ಕೊಡಿಸುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಎಂ. ಉದಾಸಿ : ಇದು 2002–03ನೇ ಇಸವಿಯ ಬೆಳೆ ಪರಿಹಾರದ ಬಗ್ಗೆ ಅವರು ಕೇಳುತ್ತಾ ಇರುವಾಗ, ಇನ್ನು 2003–04ರದ್ದು ಹೇಗೆ?

ಅಧ್ಯಕ್ಷರು : ಸಂಬಂಧಪಟ್ಟ ಆ ಪ್ರಶ್ನೆ ಬಂದಾಗ ತಾವು ಉಪಪ್ರಶ್ನೆಯನ್ನು ಕೇಳಬಹುದು. ಇನ್ನೂ ಪ್ರಶ್ನೆಗಳೇ ಮುಗಿದಿಲ್ಲ. ದಯಮಾಡಿ ಸಹಕರಿಸಿ. ಆ ಪ್ರಶ್ನೆ ಈಗ ನಮ್ಮ ಮುಂದೆ ಇಲ್ಲ.

ಶ್ರೀ ಸಿ.ಎಂ. ಉದಾಸಿ : ನಿಶ್ಚಿತ ದಿನಾಂಕವನ್ನಾದರೂ ಗೊತ್ತುಪಡಿಸಿ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಐದಾರು ದಿವಸ ಅಂತ ಹೇಳಿಕೊಮಡು ಹೋಗಿ ಅದು ಬರದೇ ಹೋಗಿಬಿಟ್ಟರೆ ರೈತರಿಗೆ ಅನ್ಯಾಯವಾಗುತ್ತದೆ.

ಅಧ್ಯಕ್ಷರು : ಮುಂದಿನ ಬುಧವಾರ ಕೊಡಿಸುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ರೇವು ನಾಯಕ್ ಬೆಳಮಗಿ : ಸನ್ಮಾನ್ಯ ಅಧ್ಯಕ್ಷರೆ, ಸತತವಾಗಿ ಮೂರು ವರ್ಷಗಳಿಂದ ಬರಗಾಲ ಇದೆ. ಆದರೆ ಹತ್ತು ಪೈಸೆ ಕೂಡ ಇನ್‌ಶ್ಯೂರೆನ್ಸ್ ಹಣ ನನ್ನ ಕ್ಷೇತ್ರಕ್ಕೆ ಬಂದಿಲ್ಲ. ನಾನು ಇದನ್ನು ನೊಂದು ಹೇಳಬೇಕಾಗುತ್ತದೆ. ಗುಲ್ಬರ್ಗಾ ಜಿಲ್ಲೆಯ ಅಳಂದಾ ತಾಲ್ಲೂಕಿಗೆ ಬಂದಿಲ್ಲ. ಬೇರೆ ಕಡೆ ಗುರುಮಿಟ್ಕಲ್, ಜೀವರ್ಗಿಯಲ್ಲಿ ಸಾಕಷ್ಟು ಹಣ ಕೊಟ್ಟಿದ್ದಾರೆ. ಇದು ಬಹಳ ತಾರತಮ್ಯವಾಗಿದೆ. ನಾನು ನೊಂದು ಹೇಳುತ್ತೇನೆ, ಅವರು ಉದ್ದೇಶಪೂರ್ವಕವಾಗಿ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು : ಮಾನ್ಯ ರೇವುನಾಯಕ್‌ರವರೇ, ನಾನು ಉತ್ತರ ಕೊಡಿಸುತ್ತೇನೆ. ಅದು ನನ್ನ ಜವಾಬ್ದಾರಿ ಇದೆ. ದಯಮಾಡಿ ತಾವು ಸಹಕರಿಸಬೇಕು. ಈಗ ಮುಂದಿನ ಪ್ರಶ್ನೆ ಮಾನ್ಯ ಡಿ.ಎನ್. ಜೀವರಾಜ್ ಅವರದ್ದು.

ಶೃಂಗೇರಿ, ಕೊಪ್ಪ ಮತ್ತು ಎನ್.ಆರ್. ಪುರ ತಾಲ್ಲೂಕುಗಳಲ್ಲಿ ಪಶು ಆಸ್ಪತ್ರೆಯಲ್ಲಿ ಸಿಬ್ಬಂದಿ ತುಂಬುವುದು

27 (40) : ಶ್ರೀ ಜೀವರಾಜ್ ಡಿ.ಎಸ್. (ಶೃಂಗೇರಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ ಮತ್ತು ಎನ್.ಆರ್. ಪುರ ತಾಲ್ಲೂಕುಗಳಲ್ಲಿ ಇರುವ ವಿವಿಧ ದರ್ಜೆಯ ಪಶು ಆಸ್ಪತ್ರೆಗಳು, ಮಂಜೂರಾದ ಸಿಬ್ಬಂದಿ ಹಾಗೂ ಹಾಲಿ ಖಾಲಿ ಇರುವ ಹುದ್ದೆಗಳು ಎಷ್ಟು (ಆಸ್ಪತ್ರೆವಾರು ಅಂಕಿ ಅಂಶಗಳ ವಿವರ ನೀಡುವುದು);

ಆ) ಶೃಂಗೇರಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿರುವ ಕೆರೆಕಟ್ಟೆಯ ಪಶು ಆಸ್ಪತ್ರೆಯಲ್ಲಿ ಸಿಬ್ಬಂದಿ ಇಲ್ಲದಿಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;